ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:1603/2018

ಚಾಸಾ:6 ಪ್ರಾಸಾ:6

ದಿನಾಂಕ: 30.09.2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಜಹೀರ್ |
| ತಂದೆಯ ಹೆಸರು | : | ಸಲಾಹುದ್ದೀನ್ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಭಟ್ಕಳ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಸಾಕ್ಷಿಗೆ ದಿ: 25-12-2017 ರ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಯನ್ನು ನಿಪಿ-4 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ದಿ: 21-11-2017 ರಲ್ಲಿ ಭಟ್ಕಳದ ಕಾರ್ ಗೆದ್ದೆಯಲ್ಲಿ ಒಂದು ರಾಬರಿ ಆಗಿದ್ದು, ರಾಬರಿ ಆದ ಸಲಾವುದ್ದೀನ್ ರವರ ಮನೆಯ ಬಳಿ ಹೋಗಿರುತ್ತೇವೆ. ಆ ಸಮಯದಲ್ಲಿ ಪೊಲೀಸರು ಬಂದಿದ್ದು, ಕಳುವು ಆದ ಬಗ್ಗೆ ಅವರು ದೂರನ್ನು ಕೊಟ್ಟಿದ್ದರು.

ಭಟ್ಕಳ ಗ್ರಾಮೀಣ ಠಾಣೆಯ ಪೊಲೀಸರು ನಮ್ಮನ್ನು ಪಂಚರಾಗಿ ಕರೆದಿದ್ದು, ನಾವು ಠಾಣೆಗೆ ಹೋಗಿದ್ದೇವು. ಅಲ್ಲಿ ಪೊಲೀಸರು ಪಂಚನಾಮೆ ಬರೆದು ಸಾಕ್ಷಿಯಾಗಿ ಸಹಿ ಮಾಡು ಎಂದು ಹೇಳಿದರು. ಪೊಲೀಸರು ಠಾಣೆಯಲ್ಲಿ ಮಂಕಿ ಕ್ಯಾಪ್, ಚೂರಿಯನ್ನು ತೋರಿಸಿದ್ದರು.4 ಜನ ಆರೋಪಿತರು ಸ್ವಿಫ್ಟ್ ಕಾರಿನಲ್ಲಿ ಬಂದಿದ್ದರು ಎಂದು ಹೇಳಿದರು. ಸಾಕ್ಷಿಗೆ 2 ನೇ ಆರೋಪಿಯನ್ನು ವಿ.ಸಿ ಮೂಲಕ ಹಾಜರುಪಡಿಸಿದು ಸಾಕ್ಷಿ ಅವರನ್ನು ನೋಡಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ದಿಃ 25-12-2017 ರಂದು ಚಾಸಾ-10 ರವರು ಠಾಣೆಗೆ ಕರೆದಿದ್ದು, ಆರೋಪಿಗಳನ್ನು ತೋರಿಸಿರುತ್ತಾರೆ, ಎಷ್ಟು ಜನ ಆರೋಪಿತರನ್ನು ತೋರಿಸಿದ್ದಾರೆ ಎಂದು ನೆನಪಿಲ್ಲ. ಈಗ ಆರೋಪಿತರನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 3 ಗಂಟೆಯವರೆಗೆ ಬರೆದಿರುತ್ತಾರೆ. ಚಾಕು, ಕಾರು ಮತ್ತು ಕ್ಯಾಪ್ ನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**(ಈ ಹಂತದಲ್ಲಿ ನ್ಯಾಯಾಲಯದ ಮಧ್ಯಾಹ್ನದ ಕಾಲಾವಧಿ ಮುಗಿದ ಕಾರಣ ಸ.ಸ.ಅರವರ ಪಾಟೀ ಸವಾಲನ್ನು ಮುಂದೂಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ**

ದಿಃ 25-12-2017 ರಂದು ಚಾಸಾ-10 ರವರು ಪಂಚರಾಗಿ ನಮ್ಮನ್ನು ಕರೆದಿದ್ದು, ನಾವು ಠಾಣೆಯಲ್ಲಿ ಹಾಜರಿರುತ್ತೇವೆ ಎಂದರೆ ಸರಿ. ದಸ್ತಗಿರಿ ಮಾಡಲಾಗಿದ್ದ 1 ನೇ ಆರೋಪಿಯನ್ನು ತೋರಿಸಿದ್ದರು ಎಂದರೆ ಸರಿ. ಚಾಸಾ-8 ರವರು ಭಟ್ಕಳದ ಶಿರಾಲಿ ಚೆಕ್ ಪೋಸ್ಟ್ ನಲ್ಲಿ ವಾಹನದ ತಪಾಸಣೆ ಮಾಡುತ್ತಿದ್ದಾಗ ಹೊನ್ನಾವರ ಕಡೆಯಿಂದ ಭಟ್ಕಳ ಕಡೆಗೆ ಬರುತ್ತಿದ್ದ ಮಾರುತಿ ಸ್ವಿಫ್ಟ್ ಕಾರನ್ನು ನಿಲ್ಲಿಸಿದಾಗ 1 ನೇ ಆರೋಪಿಯನ್ನು ವಶಕ್ಕೆಪಡೆದಿರುವ ಬಗ್ಗೆ ಚಾಸಾ-10 ರವರು ನನ್ನ ಬಳಿ ತಿಳಿಸಿರುತ್ತಾರೆ ಎಂದರೆ ಸರಿ. ಸದ್ರಿ ವಾಹವನ್ನು ಪರಿಶೀಲನೆ ಮಾಡಿದಾಗ ಯಾವುದೇ ದಾಖಲೆ ಇರಲಿಲ್ಲ ಅದು ಕಳುವು ಮಾಡಿದ ವಾಹನವೆಂದು ಚಾಸಾ-10 ರವರು ನನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ.

1 ನೇ ಆರೋಪಿಯ ಸ್ವಖುಷಿ ಹೇಳಿಕೆ ಪಡೆದುಕೊಂಡಿದ್ದು, ಆತ ಉಳಿದ ಆರೋಪಿಗಳ ಹೆಸರನ್ನು ತಿಳಿಸಿರುತ್ತಾರೆ ಎಂದು ನನಗೆ ಹೇಳಿದ್ದಾರೆ ಎಂದರೆ ಸರಿ. ಕೆಎ-51-ಎನ್-1122 ಮಾರುತಿ ಸ್ವಿಫ್ಟ್ ಕಾರು, ಮಂಕಿ ಕ್ಯಾಪ್ ಮತ್ತು ಬಿಳಿ ಬಣ್ಣದ ಪ್ಲಾಸ್ಟರ್ ಟೇಪ್ ಹಾಗೂ ಒಂದು ಸ್ಟೀಲ್ ಚಾಕುವನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. 1 ನೇ ಆರೋಪಿ ಪೊಲೀಸ್ ಠಾಣೆಯ ಆವರಣದಲ್ಲಿದ್ದ ಮಾರುತಿ ಸ್ವಿಫ್ಟ್ ಕಾರನ್ನು ತೋರಿಸಿ ಇದೇ ಕಾರನ್ನು ಕಳ್ಳತನ ಮಾಡುವ ಸಮಯದಲ್ಲಿ ಉಪಯೋಗಿಸಿದ್ದು, ಕಾರನ್ನು ಸಹ ಕಳ್ಳತನ ಮಾಡಿಕೊಂಡು ಬಂದಿರುವುದಾಗಿ, ಅದರ ನಂಬರ್ ಪ್ಲೇಟ್ ತೆಗೆದು ಡುಪ್ಲಿಕೇಟ್ ನಂಬರ್ ಪ್ಲೇಟ್ ಹಾಕಿರುವುದಾಗಿ ಎಂದು ತನ್ನ ಸ್ವ ಖುಷಿ ಹೇಳಿಕೆಯಲ್ಲಿ ಹೇಳಿರುವುದಾಗಿ

ತಿಳಿಸಿರುತ್ತಾರೆ ಎಂದರೆ ಸರಿ. ಪೋಲಿಸ್ ಠಾಣಾ ಆವರಣದಲ್ಲಿ ಪೊಲೀಸರು 2 ರಿಂದ 3-30 ರವರೆಗೆ ಮಹಜರು ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ 1 ನೇ ಆರೋಪಿತರ ಪರ ವಕೀಲರಾದ ಶ್ರೀ ಕೆ ಎಂ ಐ ರವರಿಂದಃ**

ನಾನು ಸುಮಾರು 23 ವರ್ಷಗಳಿಂದ ಭಟ್ಕಳದಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಭಟ್ಕಳ ಪೊಲೀಸರ ಪರಿಚಯವಿದೆ ಎಂದರೆ ಸರಿ. ಚಾಸಾ-10 ರವರು ನನಗೆ ಆತ್ಮೀಯರಾಗಿದ್ದು ಸಾಕ್ಷಿಯಾಗಿ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿಪಿ-4 ರ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ನಾನು ಠಾಣೆಗೆ ಹೋಗಿಲ್ಲ, ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ, ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-4 ರ ದಾಖಲೆಗೆ ಸಲಾವುದ್ದೀನ್ ರವರ ಮನೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಲಾವುದ್ದೀನ್ ರವರು ನಮ್ಮ ಏರಿಯಾದಲ್ಲಿ ಇದ್ದಾರೆ. ಅವರಿಗೆ ಸಹಾಯ ಮಾಡಲು ಈ ದಿನ ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿ.

2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**